CAREERINDIA

**Language Code : 07**

इस पुस्तिका में **20** मुद्रित पृष्ठ हैं।
This booklet contains **20** Printed pages.

# SED-24-II

**प्रश्न-पत्र-II / PAPER-II**
**कन्नड़ भाषा परिशिष्ट**
**Kannada Language Supplement**
**भाग-IV & V / PART-IV & V**

**मुख्य परीक्षा पुस्तिका संख्या / Main Test Booklet No.**

**मुख्य परीक्षा पुस्तिका कोड / Main Test Booklet Code**

**D**

**इस परीक्षा पुस्तिका को तब तक न खोलें जब तक कहा न जाए।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें।**
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें। / FOR INSTRUCTIONS IN KANNADA SEE PAGE 2 OF THIS BOOKLET.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग I एवं भाग II **या** III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं OMR उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें।
5. इस भाषा पुस्तिका का **संकेत** है **D**। यह सुनिश्चित कर लें कि इस भाषा परिशिष्ट पुस्तिका का संकेत, OMR उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा-I (कन्नड़) (प्र. 91 से प्र. 120)
   भाग-V : भाषा-II (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से संबंधित प्रश्न दिए गए हैं। **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए। जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा-I (भाग-IV) में चुनी गई भाषा से भिन्न हो।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

## INSTRUCTIONS FOR CANDIDATES

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I and Part II **OR** III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page/ marking responses in the OMR Answer Sheet.
5. The CODE for this Language Booklet is **D**. Make sure that the CODE printed on **Side-2** of the OMR Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language-I (Kannada) (Q. 91 to Q. 120)
   Part-V : Language-II (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part-V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capitals) :
अनुक्रमांक : (अंकों में) / Roll Number : in figures ____________________
: शब्दों में / in words ____________________
परीक्षा केन्द्र (बड़े अक्षरों में) : ____________________
Centre of Examination (in Capitals) :
परीक्षार्थी के हस्ताक्षर : ____________________ निरीक्षक के हस्ताक्षर : ____________________
Candidate's Signature : Invigilator's Signature :
Facsimile Signature Stamp of
Centre Superintendent : ____________________

www.careerindia.com

CAREERINDIA

Language Code : **07**

# SED-24-II

**ಪ್ರಶ್ನೆ ಪತ್ರಿಕೆ–II**
**ಕನ್ನಡ ಭಾಷಾ ಪೂರಕ**
**ಭಾಗ IV ಮತ್ತು V**

ಪ್ರಶ್ನೆ ಪುಸ್ತಿಕೆ ಸಂಕೇತ

**D**

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**
**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 ಮತ್ತು 20) ಗಮನವಿಟ್ಟು ಓದಿರಿ.**
**ಪರೀಕ್ಷಾರ್ಥಿಗಳಿಗೆ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) **ಅಥವಾ** ಭಾಗ V (ಭಾಷೆ II)ನ್ನು **ಕನ್ನಡ** ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು **ಎರಡನ್ನೂ ಅಲ್ಲ.**
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II ಮತ್ತು III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು **ಕೇವಲ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ **ಸಂಕೇತ D** ಆಗಿದೆ. OMR ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ OMR ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳಿವೆ ಭಾಗ IV ಮತ್ತು V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ.
   ಭಾಗ–IV : ಭಾಷಾ I – (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ–V : ಭಾಷಾ II – (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ–IV ರಲ್ಲಿ ಭಾಷೆ–I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ–V ರಲ್ಲಿ ಭಾಷೆ–II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ–I ಮತ್ತು/ಅಥವಾ ಭಾಷೆ–II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು – ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. **ಪರೀಕ್ಷಾರ್ಥಿ ಭಾಗ–V (ಭಾಷೆ–II) ಕ್ಕಾಗಿ, ಭಾಷೆ–I (ಭಾಗ–IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.**
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ____________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) : ____________________

: (ಅಕ್ಷರಗಳಲ್ಲಿ) : ____________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) : ____________________

ಪರೀಕ್ಷಾರ್ಥಿಯ ಸಹಿ : ____________________ ನಿರೀಕ್ಷಕರ ಸಹಿ : ____________________

Facsimile signature stamp of
Centre Superintendent : ____________________

www.careerindia.com

CAREERINDIA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 91 - 120**) ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only.

www.careerindia.com

## PART–IV

## LANGUAGE–I

## KANNADA

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು **(ಪ್ರಶ್ನೆ ಸಂಖ್ಯೆ 91 - 120)** ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91-99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಸಂಗೀತ ಕ್ಷೇತ್ರದಲ್ಲಿ ಜಾತಿಯು ತುಂಬಾ ಸೂಕ್ಷ್ಮವಾಗಿ ಕೆಲಸ ಮಾಡುತ್ತಿತ್ತು. ಉದಾಹರಣೆಗೆ ಹೇಳುವುದಾದರೆ, ನಾಗಸ್ವರವನ್ನು ಸದಾ ಕೆಳಜಾತಿಯ ಜನರೇ–ಅದರಲ್ಲೂ ದೇವದಾಸಿಯರ ಮಕ್ಕಳೇ–ನುಡಿಸುತ್ತಿದ್ದರು. ನೋಡಲು ಒಂದು ಸಾಮಾನ್ಯ ನಳಿಕೆಯಂತೆ ಕಾಣುವ ನಾಗಸ್ವರಕ್ಕೆ ಯಾವಾಗಲೂ ಮಂಗಳವಾದ್ಯದ ಸ್ಥಾನಮಾನವೇ ಇತ್ತೆನ್ನುವುದು ನಿಜ. ಆದರೂ ಬ್ರಾಹ್ಮಣರು ಮಾತ್ರ ನಾಗಸ್ವರ ವಾದನವನ್ನು ಕಲಿತಿರಲಿಲ್ಲ ಅಂದರೆ, ಅವರ ಪಾಲಿಗೆ ನಾಗಸ್ವರ ವಾದನ ಕಲಿಕೆ ನಿಷಿದ್ಧವಾಗಿತ್ತು. ತುಂಬಾ ಕಾಲ ಮೃದಂಗದ್ದೂ ಇದೇ ಗತಿಯಾಗಿತ್ತು. ಅದರ ಎರಡೂ ಬದಿಗಳನ್ನು ಆಡಿನ ಚರ್ಮದಿಂದ ಮಾಡುತ್ತಾರೆ ಎನ್ನುವ ಕಾರಣಕ್ಕೆ ಬ್ರಾಹ್ಮಣರು ಇದನ್ನೂ ದೂರವಿಟ್ಟಿದ್ದರು. ಆರಂಭದ ದಿನಗಳಲ್ಲಿ ತಮಿಳು ಪಿಳ್ಳೈಗಳು – ಕೇರಳದ ನಂಬೂದಿರಿ ಬ್ರಾಹ್ಮಣರಲ್ಲಿ ಬರುವ ಪಿಳ್ಳೈಗಳಲ್ಲ – ತಾಳವಾದ್ಯದಲ್ಲಿ ಬಹುದೊಡ್ಡ ಹೆಸರು ಮಾಡಿದ್ದರು. ಈ ಪೈಕಿ ನಾವು ಕುಂಭಕೋಣಂ ದಕ್ಷಿಣಾಮೂರ್ತಿ ಪಿಳ್ಳೈ ಮತ್ತು ಪುದುಕೋಟ್ಟೈ ಮನಪೂಂಡಿಯಾ ಪಿಳ್ಳೈ ಅವರನ್ನು ಉದಾಹರಣೆಯಾಗಿ ನೋಡಬಹುದು. ಆದರೆ ಈ ತಾಳವಾದ್ಯಗಳು ಎಂಥ ಅಸಾಧಾರಣವಾದ ಆಕರ್ಷಣೆಯನ್ನು ಹುಟ್ಟುಹಾಕಿದವೆಂದರೆ, ನಂತರದ ದಿನಗಳಲ್ಲಿ ಇದನ್ನು ದೂರವಿಡುವುದು ಬ್ರಾಹ್ಮಣರಿಗೆ ಸಾಧ್ಯವಾಗಲಿಲ್ಲ. ಹೀಗಾಗಿ, 1900 ರ ಹೊತ್ತಿಗೆಲ್ಲ ಬ್ರಾಹ್ಮಣರೇ ಅಗ್ರಗಣ್ಯ ಮೃದಂಗವಾದಕರಾದರು. ಇದಕ್ಕೆ ಉದಾಹರಣೆಯಾಗಿ ಮೃದಂಗದ ಮೇಲೆ ಬೆರಳುಗಳನ್ನು ಮೋಹಕವಾಗಿ ಆಡಿಸುತ್ತಿದ್ದ ಮೈಲತ್ತೂರು ಕೃಷ್ಣಯ್ಯರ್, ತಂಜಾವೂರು ವೈದ್ಯನಾಥ ಅಯ್ಯರ್ ಮತ್ತು ಪಾಲ್ಘಾಟ್ ಮಣಿ ಅಯ್ಯರ್ ಅವರನ್ನು ಹೆಸರಿಸಬಹುದು.

ವಾದ್ಯಗಳ ವಿಷಯದಲ್ಲಿ ಹೀಗಾದರೆ ಗಾಯನ ಕ್ಷೇತ್ರದ ಪರಿಸ್ಥಿತಿ ಬೇರೆಯೇ ಆಗಿತ್ತು. ಅಂದರೆ, ಅದು ಯಾವತ್ತೂ ಹೆಚ್ಚೂಕಮ್ಮಿ ಬ್ರಾಹ್ಮಣರಾದ ಅಯ್ಯಂಗಾರ್‌ಗಳ ಮತ್ತು ಅಯ್ಯರ್‌ಗಳ ಆಡುಂಬೊಲವೇ ಆಗಿತ್ತು. ಹತ್ತೊಂಬತ್ತನೇ ಶತಮಾನವು ಸಂಶಯಕ್ಕೆಡೆ ಇಲ್ಲದಂತೆ ಉಂಟುಮಾಡಿದ ವೈಚಾರಿಕ ಸತ್ಪರಿಣಾಮವು ಇವರಿಗೆ ಇನ್ನಷ್ಟು ದೊಡ್ಡ ವ್ಯಾಪ್ತಿಯನ್ನು ತಂದುಕೊಟ್ಟಿತು. ವಸಾಹತುಶಾಹಿ ಆಡಳಿತಗಾರರಾದ ಐರೋಪ್ಯರು ಹೊಂದಿದ್ದ ಅತ್ಯುತ್ತಮ ಕಲಾಭಿರುಚಿಯು ಅವರಿಗೆ ಆಡಳಿತ ಮತ್ತು ಶಿಕ್ಷಣರಂಗಗಳಲ್ಲಿ ತೀರಾ ನಿಕಟವಾಗಿದ್ದ ಬ್ರಾಹ್ಮಣರ ಮೇಲೆ ಅಗಾಧವಾದ ಪರಿಣಾಮವನ್ನು ಉಂಟುಮಾಡಿತು. ಇದರ ಜೊತೆಗೆ ಆಗ ಪ್ರಖರವಾಗಿ ನಡೆಯುತ್ತಿದ್ದ ರಾಷ್ಟ್ರೀಯ ಚಳುವಳಿಯೂ ತನ್ನದೇ ಆದ ತೀವ್ರಸ್ವರೂಪದ ಪರಿಣಾಮಗಳನ್ನು ಬೀರಿತು. ಇದರ ಪರಿಣಾಮವಾಗಿ ಏನಾಯಿತೆಂದರೆ, ಸಾಂಪ್ರದಾಯಿಕ ಭಾರತೀಯ ಸಂಸ್ಕೃತಿಗೆ ಸೇರಿದ್ದು ಎನ್ನಲಾದ ಪ್ರತಿಯೊಂದು ಅಂಶವನ್ನೂ ವೈಭವೀಕರಿಸುವುದು ದೇಶಭಕ್ತಿ ಎನ್ನುವಂತಾಯಿತು. ಇದು ಎಷ್ಟರ ಮಟ್ಟಿಗಿತ್ತೆಂದರೆ, ಆಗೆಲ್ಲ ಅಖಿಲ ಬಾರತೀಯ ಮಟ್ಟದ ಸಂಗೀತ ಸಮಾವೇಶದ ಜತೆಜತೆಯಲ್ಲೇ ಕಾಂಗ್ರೆಸ್ ಪಕ್ಷದ ಅಧಿವೇಶನ ಕೂಡ ನಡೆಯುತ್ತಿತ್ತು. ಅಲ್ಲದೆ, ಆಗ ಮೇಲ್ಜಾತಿಗಳೇ ಕಾಂಗ್ರೆಸ್‌ನಲ್ಲಿ ಪ್ರಬಲವಾಗಿದ್ದು ಇವೆಲ್ಲವೂ ಕಲೆಗಳಿಗೆ ಸಂಪೂರ್ಣ ಬೆಂಬಲ ಕೊಟ್ಟವು.

ಪ್ರಾಯಶ: ಈ ಪ್ರಭಾವ, ಪರಿಣಾಮಗಳೆಲ್ಲ ಅಷ್ಟೊಂದು ಮುಖ್ಯವಲ್ಲ ಅನಿಸುತ್ತದೆ. ಹಾಗೆಯೇ, ದಕ್ಷಿಣ ಭಾರತದಲ್ಲಿ ಸಂಗೀತ ಮತ್ತು ನೃತ್ಯಗಳಿಗೆ ಬ್ರಾಹ್ಮಣರು ಸಹಜವಾಗಿಯೇ ಪ್ರೋತ್ಸಾಹ ನೀಡಿದರೆನಿಸುತ್ತದೆ. ಸ್ವತ: ತಮಿಳು ಬ್ರಾಹ್ಮಣರೇ ಆದ ಚಿಂತಕ ಟಿ.ಜಿ. ವೈದ್ಯನಾಥನ್ ಹೇಳುವ ಪ್ರಕಾರ 'ಮೂಲತ: ಬ್ರಾಹ್ಮಣರು ಯಾವತ್ತೂ ಅಂಕಿಸಂಖ್ಯೆಗಳ ಜೊತೆ ನಂಟು ಹೊಂದಿರುವವರೇ ಆಗಿದ್ದಾರೆ. ಅವರು ಮಾಡುತ್ತಿದ್ದ ಉದ್ಯೋಗಗಳಾದ ಲೆಕ್ಕಪತ್ರ ನಿರ್ವಹಣೆ, ಸಂಖ್ಯಾಶಾಸ್ತ್ರ, ಜಾತಕದ ತಾಳೆ ಎಲ್ಲವೂ ಅಂಕಿಸಂಖ್ಯೆಗಳನ್ನೇ ಆಧರಿಸಿದ್ದವು. ಈ ದೃಷ್ಟಿಯಿಂದ ನೋಡಿದರೆ ಕರ್ನಾಟಕ ಸಂಗೀತವು ಗಣಿತವೇ ಆಗಿದೆ, ಅದರಲ್ಲೂ ಮೃದಂಗ ವಾದನವಂತೂ ಪಕ್ಕಾ ಗಣಿತವೇ! ಮಿಕ್ಕಂತೆ, ಭರತನಾಟ್ಯ ಕೂಡ ಗಣಿತಾತ್ಮಕವೇ ಆಗಿರುವುದು ಸತ್ಯ. ಏಕೆಂದರೆ, ಒಂದು ಕಛೇರಿಯಲ್ಲಿ ನ್ಯಾನೋ ಸೆಕೆಂಡುಗಳ ಲೆಕ್ಕದಲ್ಲಿ ತಾಳದ ಲೆಕ್ಕಾಚಾರ ನಡೆಯುತ್ತಿರುತ್ತದೆ.' ಅವರು ತಮ್ಮ ಈ ಮಾತುಗಳನ್ನು ಮುಂದುವರಿಸುತ್ತ 'ಇಂದು ತಮಿಳುನಾಡಿನಲ್ಲಿ ಬ್ರಾಹ್ಮಣವಾದವು ಉಳಿದಿರುವುದೇ ಸಂಗೀತದಿಂದ'. ಎಂದು ಕೂಡ ಹೇಳಿದ್ದಾರೆ. ವೈದ್ಯನಾಥನ್ ಅವರ ಈ ಮಾತು ಚಮತ್ಕಾರದಿಂದ ಕೂಡಿರುವ ಚಾಟೂಕ್ತಿಯಂತಿದೆ.

www.careerindia.com

CAREERINDIA

91. ಸತ್ಪರಿಣಾಮ ಪದದ ವಿರುದ್ಧಾರ್ಥಕ ಪದ ಯಾವುದು ?
(1) ಪರಿಮಾಣ (2) ತತ್ಪರಿಣಾಮ
(3) ದುಷ್ಪರಿಣಾಮ (4) ಒಳ್ಳೆಯ ಪರಿಣಾಮ

92. 'ಪ್ರತಿಯೊಂದು' ಪದವು ಯಾವ ಸಂಧಿ ?
(1) ಗುಣ ಸಂಧಿ (2) ಆಗಮ ಸಂಧಿ (3) ಲೋಪ ಸಂಧಿ (4) ಆದೇಶ ಸಂಧಿ

93. 'ಮೃದಂಗ ವಾದನ ಮತ್ತು ಭರತನಾಟ್ಯಶಾಸ್ತ್ರ ಗಣಿತಾತ್ಮಕವೇ' – ಏಕೆಂದರೆ –
(1) ನ್ಯಾನೋ ಸೆಕೆಂಡುಗಳ ಲೆಕ್ಕದಲ್ಲಿ ತಾಳದ ಲೆಕ್ಕಚಾರವಿದೆ
(2) ಶಬ್ದ ತರಂಗಗಳನ್ನು ಎಣಿಕೆ ಮಾಡಬೇಕು
(3) ತಾಳಮಾನವನ್ನು ಎಣಿಕೆ ಮಾಡಿ ಬಾರಿಸಬೇಕು
(4) ಹೆಜ್ಜೆಗಳ ಲೆಕ್ಕ ಇಟ್ಟಿರಬೇಕು

94. 'ಜೊತೆಜೊತೆ' ಪದವು –
(1) ಅನ್ಯದೇಶ್ಯ (2) ಜೋಡಿಪದ (3) ದ್ವಿರುಕ್ತಿ (4) ಸಂಖ್ಯಾವಾಚಕ

95. ಐರೋಪ್ಯರು ಎಂದರೆ ಯಾರು ?
(1) ಯೂರೋಪಿಯನ್ನರು (2) ಬ್ರಾಹ್ಮಣರು
(3) ಸಂಪ್ರದಾಯವಾದಿಗಳು (4) ಸನಾತನವಾದಿಗಳು

96. ರಾಷ್ಟ್ರೀಯ ಚಳುವಳಿಯ ಕಾಲದಲ್ಲಿ ದೇಶಭಕ್ತಿ ಸ್ವರೂಪವೇನು ?
(1) ಅಧಿವೇಶನಗಳನ್ನು ನಡೆಸುವುದು
(2) ದೇಶಭಕ್ತಿ ಗೀತೆಗಳನ್ನು ಹಾಡುವುದು
(3) ಸಂಗೀತಾಭ್ಯಾಸ ನಡೆಸುವುದು
(4) ಭಾರತೀಯ ಸಂಸ್ಕೃತಿಯ ಎಲ್ಲಾ ಅಂಶಗಳನ್ನು ವೈಭವೀಕರಿಸುವುದು

97. 'ಸಂಸ್ಕೃತಿಗೆ' ಪದದಲ್ಲಿರುವ ವಿಭಕ್ತಿ ಪ್ರತ್ಯಯ :
(1) ಪಂಚಮಿ ವಿಭಕ್ತಿ (2) ಪ್ರಥಮ ವಿಭಕ್ತಿ (3) ಚತುರ್ಥಿ ವಿಭಕ್ತಿ (4) ದ್ವಿತೀಯ ವಿಭಕ್ತಿ

98. ಮೃದಂಗವನ್ನು ಬ್ರಾಹ್ಮಣರು ಬಳಸದಿದ್ದುದಕ್ಕೆ ಕಾರಣವೇನು ?
(1) ಅದು ವಾದ್ಯವಲ್ಲ
(2) ಅದು ಗಟ್ಟಿಯಾಗಿತ್ತು
(3) ಅದನ್ನು ಆಡಿನ ಚರ್ಮದಿಂದ ಮಾಡಿರುತ್ತಾರೆ
(4) ಮೃದಂಗದ ಬೆಲೆ ಹೆಚ್ಚು

99. ನಾಗಸ್ವರವನ್ನು ನುಡಿಸುತ್ತಿದ್ದವರು ಯಾರು ?
(1) ನೃತ್ಯಗಾರರು (2) ವಿದ್ವಾಂಸರು (3) ಕೆಳಜಾತಿಯವರು (4) ಬ್ರಾಹ್ಮಣರು

www.careerindia.com

CAREERINDIA

**ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 100-105) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಒಂದು ಧರ್ಮಕ ಮೊಳೆತು ಇನ್ನೊಂದರಲ್ಲಿ ಫಲಿತು
ಸಾರ ಒಂದೇ ಎಂದು ಹಾಡಿದಾತ,
ಹನಿ ಸೇರಿ ಹೊಳೆಯಾಗಿ ಗುರಿ ಸೇರಿ ಕಡಲಾಗಿ ನಭವೇರಿ ಮುಗಿಲಾಗಿ ಆಡಿದಾತ,
ಹತ್ತು ವನಗಳ ಸುತ್ತಿ, ಹೂ ಹೂವನೂ ಮುತ್ತಿ
ಒಂದೆ ಜೇನಿನ ಹುಟ್ಟು ಕಟ್ಟಿದಾತ,
ಎಲ್ಲಿ ಹೇಳೋ ತಾತ, ಹಿಂದೆ ಯಾ ಅವಧೂತ
ಸಾಧಿಸಿದ ನಿನ್ನಂತೆ ಧರ್ಮವನ್ನು, ಕಾವ್ಯದಲಿ ಕಡೆದ ಆ ಮರ್ಮವನ್ನು ?
ಸೃಷ್ಟಿ ಮರೆಸಿಟ್ಟಿರುವ ಗುಟ್ಟುಗಳನ್ನು
ಸಪ್ತಸ್ವರ ವಿಕಾರಿದಾ ಮಟ್ಟುಗಳನ್ನು
ನಿನ್ನ ನುಡಿಯಲ್ಲಿಟ್ಟೆ, ಹಾಡಿಗರ್ಥವ ಕೊಟ್ಟೆ
ಹಾಡುಮಾಡಿದೆ ನಿನ್ನ ವ್ಯಥೆಗಳನ್ನು, ಹೇಳು,
ಹೇಳು ಶರೀಫ, ಹಿಂದೆ ಯಾವ ಖಲೀಫ ಏರಿದ್ದ ಈ ಹೊನ್ನಿನಟ್ಟವನ್ನು,
ಮಣಿಸಿದ್ದ ಮಾತುಗಳ ಬೆಟ್ಟವನ್ನು ?

**100.** ಈ ಕವನವು ಯಾರನ್ನು ಕುರಿತದ್ದು ?
(1) ಸೂಫಿ ಸಂತ ಖಲೀಪ
(2) ಅಜ್ಞಾತ ಅವಧೂತ
(3) ಆಗಂತುಕ ಅನುಭಾವಿ
(4) ಶಿಶುನಾಳ ಶರೀಫ

**101.** ಮೊಳೆತು, ಫಲಿತು – ಎನ್ನುವ ಪದಗಳು ಈ ಕವನದಲ್ಲಿ ಯಾವುದಕ್ಕೆ ರೂಪಕ ?
(1) ಬೀಜವು ಗಿಡವಾಗಿ ಹಣ್ಣು ಬಿಡುವುದು
(2) ಬೀಜ ಮತ್ತು ಹಣ್ಣು
(3) ಹುಟ್ಟು ಮತ್ತು ಪಕ್ವಗೊಳ್ಳು
(4) ಚಿಕ್ಕವನಾಗಿದ್ದು ದೊಡ್ಡವನಾಗುವುದು

**102.** 'ಧರ್ಮಕ' – ಈ ಪದದಲ್ಲಿನ ವಿಭಕ್ತಿ :
(1) ಚತುರ್ಥಿ
(2) ತೃತಿಯಾ
(3) ದ್ವಿತೀಯಾ
(4) ಷಷ್ಠಿ

**103.** 'ನಭ' – ಇದು ಯಾವ ಮೂಲದ ಪದ ?
(1) ಹಿಂದಿ
(2) ಸಂಸ್ಕೃತ
(3) ಪ್ರಾಕೃತ
(4) ಕನ್ನಡ

**104.** ಹತ್ತು ವನಗಳ ಸುತ್ತಿ, ಹೂ ಹೂವನೂ ಮುತ್ತಿ
ಒಂದೇ ಜೇನಿನ ಹುಟ್ಟು ಕಟ್ಟಿದಾತ
– ಈ ಸಾಲುಗಳ ಭಾವ :
(1) ವಿಭಿನ್ನ ಅನುಭವಗಳನ್ನು ಒಂದು ಸಾರವನ್ನಾಗಿ ಮಾಡು
(2) ಕಾಡು ಹೂಗಳಿಂದ ಜೇನು ತಯಾರಿಸುವುದು
(3) ಜೇನು ಹುಟ್ಟನ್ನು ಸಾಕಿ ಬೆಳೆಸಿದವನು
(4) ವನದ ಹೂಗಳನ್ನು ಮಕರಂದ ಹೀರಿ ಜೇನು ಮಾಡಿರುವುದು

www.careerindia.com

CAREERINDIA

**105.** 'ಹೊನ್ನಿನಟ್ಟ' – ಈ ಪದದ ಅರ್ಥ :

(1) ಚಿನ್ನದ ಆಭರಣ

(2) ಚಿನ್ನದಲ್ಲಿ ಮಾಡಿದ ಮೇಲೆ ಇರುವ ಕೂರುವ ಜಾಗ

(3) ಚಿನ್ನದ ಏಣಿ

(4) ಚಿನ್ನದ ಕಂಬಗಳು

**106.** ಸಾಮಗ್ರಿಗಳ ದೃಢೀಕರಣವು ಇದನ್ನು ಕುರಿತಾಗಿದೆ :

(1) ಮಕ್ಕಳು ಮನೆಯಿಂದ ತರುವ ಸಾಮಗ್ರಿಗಳು

(2) ಶಿಕ್ಷಕನು ತನ್ನ ತರಗತಿಗೋಸ್ಕರ ಬರೆದ ಸಾಮಗ್ರಿಗಳು

(3) ಅಧಿಕಾರದಲ್ಲಿರುವ ಜನರು ಬರೆದ ಅಥವಾ ಅಭಿವೃದ್ಧಿಪಡಿಸಿದ ಸಾಮಗ್ರಿಗಳು

(4) ನಿಜ ಜೀವನದ ಸಂದರ್ಭದಲ್ಲಿ ಬರೆದ ಅಥವಾ ಅಭಿವೃದ್ಧಿಪಡಿಸಿದ ಸಾಮಗ್ರಿಗಳು

**107.** 'ಕೇಳುವುದು' ಅಂದರೆ ಪ್ರತಿಧ್ವನಿ, ಪದಗಳು, ಮಾತಿನ ಅಥವಾ ಆಡಿಯೋದ ಮಾತಿನ ಅರ್ಥವನ್ನು ತಿಳಿಯಲು ವಾಕ್ಯಗಳು– ಹೀಗೆ ಎಲ್ಲವನ್ನು ಒಳಗೊಳ್ಳುತ್ತದೆ ಎಂದು ಐದನೆಯ ತರಗತಿಯನ್ನು ಕಲಿಯುತ್ತಿರುವ ಅಪರ್ಣಾ ತಿಳಿದಿದ್ದಾಳೆ. ಕೇಳುವುದನ್ನು ಕಲಿಯಲು ಅವಳು ನಂಬುವ ವಿಧಾನ/ತಂತ್ರ ಏನು ?

(1) ಇದು ಟಾಪ್–ಡೌನ್ ಅಥವಾ ಬಾಟಮ್–ಅಪ್ ವಿಧಾನವಲ್ಲ

(2) ಟಾಪ್–ಡೌನ್ ವಿಧಾನ

(3) ಬಾಟಮ್–ಅಪ್ ವಿಧಾನ

(4) ಟಾಪ್–ಡೌನ್ ಮತ್ತು ಬಾಟಮ್–ಅಪ್ ವಿಧಾನ ಎರಡೂ

**108.** ಭಾಷಾ ಕಲಿಕೆಯಲ್ಲಿ ವ್ಯವಸ್ಥಿತ ಸಾಮರ್ಥ್ಯ ಅಂದರೇನು ?

(1) ಎಲ್ಲಾ ಮಾನವರು ಹಲವು ಭಾಷೆಗಳ ವ್ಯವಸ್ಥೆಯನ್ನು ಹೊಂದಿದ್ದಾರೆ ಎನ್ನುವುದನ್ನು ತಿಳಿಯುವುದು.

(2) ಭಾಷೆಯು ಒಂದು ವ್ಯವಸ್ಥೆಯಾಗಿ ಕೆಲಸಮಾಡುತ್ತದೆ ಎಂದು ತಿಳಿಯುವುದು ಮತ್ತು ಅನ್ವಯಿಸುವುದು.

(3) ಭಾಷೆಗಳು ವ್ಯಾಕರಣ ವ್ಯವಸ್ಥೆಯನ್ನು ಹೊಂದಿವೆ ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಮತ್ತು ಅನ್ವಯಿಸುವುದು.

(4) ಎಲ್ಲಾ ಭಾಷೆಗಳು ಸಾಮಾನ್ಯ ರಚನಾತ್ಮಕ ವ್ಯವಸ್ಥೆಯನ್ನು ಹೊಂದಿವೆ ಎಂದು ಅರ್ಥಮಾಡಿಕೊಳ್ಳುವುದು.

**109.** ಇಲ್ಲಿ ಪಠ್ಯ ಅಥವಾ ಕೆಲವು ಹೇಳಿಕೆಗಳಿವೆ. ಈ ಪಠ್ಯವು ಯಾವ ಭಾಷಾ ರಿಜಿಸ್ಟರ್ ಅನ್ನು ಪ್ರತಿನಿಧಿಸುತ್ತದೆ ಎನ್ನುವುದನ್ನು ಕಂಡುಹಿಡಿಯಿರಿ.

ಭಾರತೀಯ ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಯನ್ನು ಸಮಾನ ಎಂದು ಗುರುತಿಸುತ್ತದೆ. ಇದು ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಪುರುಷ ಮತ್ತು ಮಹಿಳೆ, ಎಲ್ಲಾ ಜಾತಿಯ ಜನರು, ಧರ್ಮಗಳು, ಬುಡಕಟ್ಟು ಸಮುದಾಯ, ವಿಭಿನ್ನ ಶೈಕ್ಷಣಿಕ ಮತ್ತು ಆರ್ಥಿಕ ಹಿನ್ನೆಲೆಯ ಎಲ್ಲರನ್ನು ಸಮಾನವಾಗಿ ಪರಿಗಣಿಸುತ್ತದೆ, ಇದರ ಅರ್ಥ ಅಸಮಾನತೆ ಹೋಗುತ್ತದೆ ಎಂದಲ್ಲ. ಆದರೆ ಕನಿಷ್ಠ ಪ್ರಜಾಪ್ರಭುತ್ವದ ಭಾರತದಲ್ಲಿ ಎಲ್ಲಾ ವ್ಯಕ್ತಿಗಳಿಗೆ ಸಮಾನ ತತ್ವವನ್ನು ಒಪ್ಪಲಾಗಿದೆ.

(1) ವೈಜ್ಞಾನಿಕ ರಿಜಿಸ್ಟರ್ (2) ರಾಜಕೀಯ ರಿಜಿಸ್ಟರ್

(3) ಸಮಾಜ ವಿಜ್ಞಾನ ರಿಜಿಸ್ಟರ್ (4) ಕಾನೂನು ರಿಜಿಸ್ಟರ್

www.careerindia.com

CAREERINDIA

**110.** ಆರನೆಯ ತರಗತಿಯ ಶಿಕ್ಷಕಿಯು ವಿದ್ಯಾರ್ಥಿಗಳಲ್ಲಿ ತಾವು ಹಿಂದೆ ಓದಿದ ಪಠ್ಯದ ಜ್ಞಾನ ಮತ್ತು ಅನುಭವಗಳನ್ನು ತಾವು ಓದುವ ಪಠ್ಯದ ಜೊತೆಗೆ ನೆನಪಿಸಿಕೊಂಡು ಜೋಡಿಸಿಕೊಳ್ಳುವಂತೆ ಹೇಳುತ್ತಾಳೆ. ಕಲಿಯುವವರು ಏನು ಮಾಡಬೇಕೆಂದು ಅವಳು ಬಯಸುತ್ತಾಳೆ ?

(1) ದೃಶ್ಯಾವಳಿಗಳನ್ನು ಅವರಿಗೆ ತಿಳಿಯುವಂತೆ ಮಾಡುವುದು

(2) ತೋರಿಸುವುದರ ಮೂಲಕ ಕಥೆಯನ್ನು ದೃಶ್ಯೀಕರಿಸುವಂತೆ ಮಾಡುವುದು

(3) ದೃಶ್ಯಾವಳಿಗಳನ್ನು ಶ್ಲಾಘಿಸುವುದು

(4) ಓದುವ ಪಠ್ಯದ ಬಗ್ಗೆ ಮೊದಲೇ ಹೇಳುವುದು

**111.** ಕಲಿಯುವವರಿಂದ ಕಲಿಕೆಯ ಉದಾಹರಣೆಗಳ ನಿರಂತರ ದಾಖಲೆಯನ್ನು ಹೀಗೆ ಕರೆಯುವರು :

(1) ಗುರುತಿಸುವಿಕೆಯ ಪರೀಕ್ಷೆ (2) ಪೋರ್ಟ್‌ಫೋಲಿಯೋ

(3) ನಿರಂತರ ಸಮಗ್ರ ಮೌಲ್ಯಮಾಪನ (4) ಪ್ರಾವೀಣ್ಯತೆಯ ಮೌಲ್ಯಮಾಪನ

**112.** ಕೆಳಗಿನವುಗಳಲ್ಲಿ ಯಾವುದನ್ನು ಸ್ವೀಕರಿಸುವ ಕೌಶಲ್ಯವೆಂದು ಕರೆಯಲಾಗುತ್ತದೆ ?

(1) ಕೇಳುವುದು ಮತ್ತು ಓದುವುದು

(2) ಕೇಳುವುದು ಮತ್ತು ಬರೆಯುವುದು

(3) ಓದುವುದು ಮತ್ತು ಮಾತನಾಡುವುದು

(4) ಮಾತನಾಡುವುದು ಮತ್ತು ಬರೆಯುವುದು

**113.** ಉದ್ಯೋಗಕ್ಕಾಗಿ ವಿದೇಶಕ್ಕೆ ಹೋಗುವ ಅನೇಕ ಭಾರತೀಯರು ಅಲ್ಲಿನ ಭಾಷೆಯನ್ನು ಕಲಿಯುತ್ತಾರೆ. ಈ ಪ್ರೇರಣೆಯನ್ನು ಏನೆಂದು ಕರೆಯಲಾಗುತ್ತದೆ ?

(1) ಇದು ಸಾಧನಾತ್ಮಕವಾದ ಅಥವಾ ಸಂಯೋಜನಾತ್ಮಕವಾದ ಪ್ರೇರಣೆಯಾಗಲೀ ಅಲ್ಲ

(2) ಸಮಗ್ರ ಮತ್ತು ಸಾಧನಾತ್ಮಕ ಪ್ರೇರಣೆ

(3) ಸಂಯೋಜನಾತ್ಮಕ ಪ್ರೇರಣೆ (Integrative)

(4) ಸಾಧನಾತ್ಮಕ ಪ್ರೇರಣೆ (Instrumental Motivation)

**114.** ಕೆಳಗಿನ ಭಾಷೆಗಳಲ್ಲಿ ಯಾವುದು ಶಾಸ್ತ್ರೀಯ ಭಾಷೆಯಲ್ಲ ?

(1) ಹಿಂದಿ (2) ತಮಿಳು (3) ಸಂಸ್ಕೃತ (4) ತೆಲುಗು

**115.** ವಿದೇಶಿ ಭಾಷೆಗಳ ಅಧ್ಯಯನ ಕುರಿತು ರಾಷ್ಟ್ರೀಯ ಶಿಕ್ಷಣ ನೀತಿ (NEP) 2020 ಹೇಳಿರುವುದರಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ನಿಜವಲ್ಲ ?

(1) ಹೆಚ್ಚುವರಿ ಆಯ್ಕೆಯಾಗಿ ಅಧ್ಯಯನ ಮಾಡುವ ಭಾಷೆಯಲ್ಲಿ ಫ್ರೆಂಚ್ ಭಾಷೆ ಇದೆ.

(2) ದ್ವಿತೀಯ ಹಂತದಲ್ಲಿ ಹೆಚ್ಚುವರಿ ಆಯ್ಕೆಯಾಗಿ ವಿದೇಶಿ ಭಾಷೆಗಳ ಅಧ್ಯಯನ.

(3) ತ್ರಿಭಾಷಾ ಸೂತ್ರದ ಅಡಿಯಲ್ಲಿ ವಿದೇಶಿ ಭಾಷೆಗಳ ಅಧ್ಯಯನವೂ ಒಂದು ಭಾಷೆಯಾಗಿ ಸೇರ್ಪಡೆಯಾಗಿದೆ.

(4) ತ್ರಿಭಾಷಾ ಸೂತ್ರದ ಅಡಿಯಲ್ಲಿ ಅಧ್ಯಯನ ಮಾಡುವ ಭಾಷೆಯಲ್ಲಿ ವಿದೇಶಿ ಭಾಷೆಗಳ ಅಧ್ಯಯನ ಒಳಗೊಂಡಿಲ್ಲ.

www.careerindia.com

CAREERINDIA

**116.** ಕೆಳಗಿನವುಗಳಲ್ಲಿ ಯಾವುದು 'ಭಾಷೆಯ ಬಗ್ಗೆ ತಿಳುವಳಿಕೆ' ಕುರಿತು ಹೇಳುತ್ತದೆ ?

(1) ಕಾರ್ಯತಂತ್ರದ ಸಾಮರ್ಥ್ಯ (2) ಘೋಷಣಾ ಜ್ಞಾನ

(3) ಕಾರ್ಯವಿಧಾನದ ಜ್ಞಾನ (4) ವ್ಯಾಕರಣ ಜ್ಞಾನ

**117.** ಆರನೆಯ ತರಗತಿಯ ಶಿಕ್ಷಕನು ಮಾತನಾಡುವ ಚಟುವಟಿಕೆಗಾಗಿ ಈ ಕೆಳಗಿನ ಚಟುವಟಿಕೆಯನ್ನು ಅಭಿವೃದ್ಧಿಪಡಿಸುತ್ತಾನೆ.

ಮರುಭೂಮಿ ಮತ್ತು ಅದರ ಹವಾಮಾನ ಪರಿಸ್ಥಿತಿಗಳ ಬಗ್ಗೆ ಐದು ವಾಕ್ಯ ಮಾತನಾಡಿ.

ಇದು ಒಳ್ಳೆಯ ಚಟುವಟಿಕೆಯೇ ? ಅಥವಾ ಒಳ್ಳೆಯದಲ್ಲವೇ ?

ಕೆಳಗಿನವುಗಳಲ್ಲಿ ನಿಮ್ಮ ಆಯ್ಕೆ (ಪ್ರತಿಕ್ರಿಯೆ) ಮತ್ತು ಅದಕ್ಕೆ ಕಾರಣ ನೀಡಿ.

(1) ಮರುಭೂಮಿ ಮತ್ತು ಅದರ ಸ್ಥಿತಿಯ ಬಗ್ಗೆ ಮಾತನಾಡಲು ಯಾವುದೇ ಸಾಂದರ್ಭಿಕ ಮಾಹಿತಿ ಇಲ್ಲದೆ ಇರುವುದರಿಂದ ಇದು ಒಳ್ಳೆಯ ಚಟುವಟಿಕೆ ಅಲ್ಲ.

(2) ಇದು ಉತ್ತಮ ಚಟುವಟಿಕೆ ಆಗಿದೆ. ಏಕೆಂದರೆ ಕಲಿಯುವವರು ತಮ್ಮ ಭೌಗೋಳಿಕ ತರಗತಿಯಲ್ಲಿ ಅದನ್ನು ಅಧ್ಯಯನ ಮಾಡಿರಬಹುದು ಮತ್ತು ಅವರಿಗೆ ಆ ಕಾರಣಕ್ಕಾಗಿ ಮಾತನಾಡಲು ವಿಷಯಗಳಿರುತ್ತವೆ.

(3) ಇದು ಉತ್ತಮ ಚಟುವಟಿಕೆ. ಏಕೆಂದರೆ ಇದು ಕಲಿಯುವವರನ್ನು ಏನು ಬೇಕಾದರೂ ಮಾತನಾಡಲು ಅವಕಾಶ ಮಾಡುತ್ತದೆ ಉದಾಹರಣೆಗೆ ಇಲ್ಲಿ ಮರುಭೂಮಿಯನ್ನು ಕುರಿತು.

(4) ಇದು ಒಳ್ಳೆಯ ಚಟುವಟಿಕೆ ಅಲ್ಲ. ಏಕೆಂದರೆ ಕೆಲವು ಕಲಿಯುವವರಿಗೆ ಮರುಭೂಮಿಯ ಬಗ್ಗೆ ಗೊತ್ತಿರುವುದಿಲ್ಲ.

**118.** ಭಾಷೆಯ ಉಪಭಾಷೆಯನ್ನು ಕುರಿತಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ ?

(1) ಕೆಲವೊಮ್ಮೆ ವಿಭಿನ್ನ ಸಾಮಾಜಿಕ ಗುಂಪುಗಳು ಒಂದೇ ಭಾಷೆಯ ವಿಭಿನ್ನ ಉಪಭಾಷೆಗಳನ್ನು ಮಾತನಾಡಬಲ್ಲರು.

(2) ಭಾಷೆಯ ಉಪಭಾಷೆಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತವೆ.

(3) ಒಂದು ಭಾಷೆಯ ವಿವಿಧ ಉಪಭಾಷೆಗಳನ್ನು ಮಾತನಾಡುವವರು ಇನ್ನೊಂದು ಉಪಭಾಷೆ ಮಾತನಾಡುವವನನ್ನು ಅರ್ಥಮಾಡಿಕೊಳ್ಳಬಲ್ಲರು.

(4) ಉಪಭಾಷೆಯು ವಿಶಾಲವಾದ ವಿಭಾಗಕ್ಕೆ ಸೇರಿದ್ದಾಗಿದೆ ಮತ್ತು ಭಾಷೆಯು ಚಿಕ್ಕ ವಿಭಾಗದ್ದಾಗಿದೆ.

**119.** ಕೆಳಗಿನ ಯಾವ ಚಟುವಟಿಕೆಗಳು ಸಮಗ್ರ ಕಲಿಕೆಯ ಕೌಶಲ್ಯವನ್ನು ಉತ್ತೇಜಿಸುತ್ತವೆ ?

(1) ಲೇಖನವನ್ನು ಬರೆಯುವುದು (2) ರೋಲ್‌ಪ್ಲೆ (ಪಾತ್ರಾಭಿನಯ)

(3) ನಿಯೋಜನೆ (4) ಪ್ರಾಜೆಕ್ಟ್ ಕಾರ್ಯ

**120.** ವ್ಯಾಕರಣ ಬೋಧನೆಯಲ್ಲಿ ಈ ಕೆಳಗಿನ ತಂತ್ರವನ್ನು ಏನೆಂದು ಕರೆಯಲಾಗುತ್ತದೆ ?

ಸಂದರ್ಭದಲ್ಲಿರುವ ಭಾಷೆಯನ್ನು ಪರಿಚಯಿಸುವುದು, ಕಲಿಯುವವರು ಭಾಷಾ ಅಂಶಗಳನ್ನು ಗಮನಿಸುವಂತೆ ಮಾಡುವುದು ನಿಜ ಜೀವನದ ಸಂದರ್ಭದಲ್ಲಿ ಬಳಸಲು ಮತ್ತು ಅದನ್ನು ಶೋಧಿಸುವ ಮೂಲಕ ಕಲಿಯುವವರ ಗಮನವನ್ನು ಸೆಳೆಯಲು ಅನುವು ಮಾಡಿಕೊಡುವುದು :

(1) ಪ್ರಜ್ಞೆಯನ್ನು ಹೆಚ್ಚಿಸುವ ವಿಧಾನ (2) ಸ್ಕೀಮ್‌ನ್ನು ರಚಿಸುವುದು

(3) ನಿಗಮನ ವಿಧಾನ (4) ಡಿಸ್ಕವರಿ ವಿಧಾನಗಳು

www.careerindia.com

CAREERINDIA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 121-150**) ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

www.careerindia.com

CAREERINDIA

**PART–V**

**LANGUAGE–II**

**KANNADA**

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು **(ಪ್ರಶ್ನೆ ಸಂಖ್ಯೆ 121-150)** ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 121-128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಮಲಯಾಳಂ ಭಾಷೆಯಲ್ಲಿ ಕಾದಂಬರಿ ಲಕ್ಷಣಗಳನ್ನು ಒಳಗೊಂಡ ಮೊದಲ ಸ್ವತಂತ್ರ ಕೃತಿ 'ಕುಂದಲತ' (1887), ಮಲಯಾಳಂನಲ್ಲಿ ಮೊದಲ ಕಾದಂಬರಿಯೆಂದು ಸಾಹಿತ್ಯ ಚರಿತ್ರೆಕಾರರು ಇದಕ್ಕೆ ಮಹತ್ವವನ್ನು ನೀಡಿದ್ದಾರೆ. ಇದಷ್ಟೆ ಅಲ್ಲದೆ ಮಲಯಾಳಂನ ಮೊದಲ ಸಾಮಾಜಿಕ ಕಾದಂಬರಿ ಇಂದು ಮೇನೋನ್ ಅವರ 'ಇಂದುಲೇಖ' (1889) ಎಂದು ಹೇಳಲಾಗಿದೆ.

ತಿರುವಿದಾಂಕೂರಿನ ಆಯಿಲ್ಯಂ ತಿರುನಾಳ್ ಮಹಾರಾಜನ ಕಾಲದಲ್ಲಿ ಅರಮನೆಯ ಕಾರ್ಯ ಚಟುವಟಿಕೆಗಳ ಉಸ್ತುವಾರಿಯ ಹೊಣೆ ಹೊತ್ತಿದ್ದ ಪಿ. ಗೋವಿಂದ ಪಿಳ್ಳೈ ಬರೆದ 'ಮಲಯಾಳ ಭಾಷಾಚರಿತ್ರೆ'ಯೇ ಮಲಯಾಳಂನ ಮೊದಲ ಸಾಹಿತ್ಯ ಚರಿತ್ರೆಯೆಂದು ಪ್ರಸಿದ್ಧವಾಗಿದೆ. ಇದು ಮೊದಲು ಪ್ರಕಟವಾದುದು 1881 ರಲ್ಲಿ, ಇದರ ಪರಿಷ್ಕೃತ ಆವೃತ್ತಿ ಎಂಟು ವರ್ಷಗಳ ನಂತರ ಪ್ರಕಟವಾಯಿತು. ಅದರ ಎರಡನೆಯ ಸಂಪುಟದಲ್ಲಿ ಸೇರಿದ ಕಂಡಿಕೆಯೊಂದು ಹೀಗಿದೆ.

"ಕೊಟಿಕೋಡ್ ತಲಕೊಡಿ ಮಠತ್ತಿಲ್ಲ ಅಪ್ಪು ನೆಡುಬಾಡಿ ಈಗ ಡಿಸ್ಟಿಕ್ಸ್ ಕೋರ್ಟ್‌ನ ನ್ಯಾಯಾಧೀಶರಾಗಿದ್ದಾರೆ. ಮೊದಲು ಮಲಯಾಳಂ ಭಾಷೆಯಲ್ಲಿ Novel ಎಂದು ಇಂಗ್ಲಿಷಿನಲ್ಲಿ ಹೇಳುವ ಮಾದರಿಯ ಒಂದು ಪುಸ್ತಕವನ್ನು ರಚಿಸಿದ್ದು ಇದೇ ವಿದ್ವಾಂಸರು, ಪುಸ್ತಕದ ಹೆಸರು 'ಕುಂದಲತ', ಅದು ವಿನೋದ ಪ್ರಜ್ಞೆಯಿಂದ ವರ್ಣಿಸುವ 20 ಅಧ್ಯಾಯಗಳಿರುವ ಕೃತಿ."

ಈ ಭಾಷಾ ಚರಿತ್ರೆಯ ಪರಿಷ್ಕೃತ ಆವೃತ್ತಿ ಪ್ರಕಟವಾಗುವುದಕ್ಕೂ ಎರಡು ವರ್ಷ ಮೊದಲೇ 1887 ಅಕ್ಟೋಬರ್‌ನಲ್ಲಿ ಅಪ್ಪು ನೆಡುಬಾಡಿಯವರು 'ಕುಂದಲತ' ಪ್ರಕಟಿಸಿದರು. ಹಾಗಾಗಿ ಇಂಗ್ಲಿಷಿನ ನಾವೆಲ್ ಮಾದರಿಯ ಮೊದಲ ರಚನೆಯೆಂದು 'ಕುಂದಲತ'ವನ್ನು ಒಪ್ಪಿಕೊಳ್ಳುವ ಸಾಹಿತ್ಯ ಅಧ್ಯಯನಕಾರರು ಪ್ರಸ್ತುತ ಮೇಲೆ ಹೇಳಿದ ಭಾಷಾ ಚರಿತ್ರೆಯ ಮಾತುಗಳನ್ನು ಉಲ್ಲೇಖಿಸುವುದಿದೆ. ಮುಂದಿನ ದಿನಗಳಲ್ಲಿ ಮಲಯಾಳಂನ ಮೊದಲ ಕಾದಂಬರಿ ಎಂಬ ಖ್ಯಾತಿ 'ಕುಂದಲತ' ಕೃತಿಗೆ ಸರ್ವತ್ರ ಪ್ರಾಪ್ತವಾಯಿತು. 1930 ರಲ್ಲಿ ಕಾದಂಬರಿ ಸಾಹಿತ್ಯದ ರೂಪಲಕ್ಷಣವನ್ನು ತಿಳಿಸುವ ಗ್ರಂಥರಚನೆ ಮಾಡಿದ ಪ್ರೊ. ಎಂ.ಪಿ. ಪೌಲ್‌ಗೂ ಈ ಬಗೆಗೆ ಸಂದೇಹವಿರಲಿಲ್ಲ. "ಟಿ.ಎಂ. ಅಪ್ಪು ನಡುಬಾಡಿಯವರ 'ಕುಂದಲತ' ಎಂಬ ಕೃತಿಯೇ ಕಾದಂಬರಿ ಸಾಹಿತ್ಯದ ಸಾಮಾನ್ಯ ಸ್ವರೂಪವನ್ನು ಆಂಗ್ಲ ಭಾಷೆಯರಿಯದ ಕೇರಳೀಯರಿಗೆ ಮೊದಲು ತಿಳಿಸಿಕೊಟ್ಟಿತು. ಅಲ್ಲದೆ ಕಾದಂಬರಿಯ ಲಕ್ಷಣಗಳನ್ನು ಒಳಗೊಂಡ ಯಾವೊಂದು ಕೃತಿಯೂ ಕೇರಳದಲ್ಲಿ ಅದಕ್ಕೂ ಪೂರ್ವದಲ್ಲಿ ರಚನೆಯಾಗಲಿಲ್ಲ" ಎಂದು ಅವರು ಹೇಳಿದ್ದಾರೆ. ಸಾಹಿತ್ಯಾಸಕ್ತರ ನಡುವೆ ಇಂದಿಗೂ ಇದರಲ್ಲಿ ಅಭಿಪ್ರಾಯ ಭೇದವಿಲ್ಲ.

ಆದರೂ ಮಲಯಾಳಂನ ಮೊದಲ ಕಾದಂಬರಿ 'ಕುಂದಲತ' ಅಲ್ಲ. ಅದು ಬೇರೆಯೇ ಆದ ಇನ್ನೊಂದು ಕೃತಿಗೆ ಸಲ್ಲಬೇಕು ಎಂಬ ವಾದವೂ ಅಲ್ಲಲ್ಲಿ ಕೇಳಿ ಬಂದುದಿದೆ. ವಿಲ್ಲಿಯಂ ಷೇಕ್ಸ್‌ಪಿಯರನ ನಾಟಕವನ್ನಾಧರಿಸಿ ಕಲ್ಲೂರು ಉಮ್ಮನ್ ಪಿಲಿಪ್ಸ್‌ಸ 1866 ರಲ್ಲಿ ಪ್ರಕಟಿಸಿದ 'ಆಳ ಮಾರಾಟ್ಟಂ ಅಥವಾ ಒರು ನಲ್ಲ ಕೇಳಿ ಸಲ್ಲಾಪಂ' (ವ್ಯಕ್ತಿ ಬದಲಾವಣೆ ಅಥವಾ ಒಂದು ಒಳ್ಳೆಯ ಕೇಳಿ ಸಲ್ಲಾಪ) ಎಂಬ ಕೃತಿಯ ಕುರಿತು ಹೇಳುವುದಿದೆ. ಇದನ್ನು ಮಲಯಾಳಂನ ಮೊದಲ ಕಾದಂಬರಿ ಎಂದು ಹೇಳಬೇಕು ಎಂದು ಉಳ್ಳೂರು ತನ್ನ ಕೇರಳ ಸಾಹಿತ್ಯ ಚರಿತ್ರೆಯಲ್ಲಿ ಹೇಳಿದ್ದಾರೆ. 1882 ರಲ್ಲಿ ಪುಸ್ತಕದ ರೂಪದಲ್ಲಿ ಪ್ರಕಟವಾದ ಆರ್ಚ್‌ಡಿಕನ್ ಕೋಶಿಯ 'ಮಲ್ಲೇಲಿ ಕುಂಜು'ವಿಗೆ ಮಲಯಾಳಂನ ಮೊದಲ ಕಾದಂಬರಿಯಾಗುವ ಎಲ್ಲಾ ಲಕ್ಷಣಗಳೂ ಇವೆಯೆಂದು ಪ್ರೊ. ಸಿ.ಡಿ. ರಾಮನ್ ನಾಯರ್ ಒಮ್ಮೆ ಅಭಿಪ್ರಾಯವೊಂದನ್ನು ಪ್ರಕಟಿಸಿದ್ದರು. ಕೋಲಿನ್ಸ್ ಮ್ಯಾಡಮ್‌ನ 'ಘಾತಕವಧಂ' ಎಂಬ ಕೃತಿಯು ಮೊದಲ ಮಲಯಾಳಂ ಕಾದಂಬರಿ ಎಂಬೊಂದು ವಾದವು ಕೇಳಿ ಬಂದುದಿದೆ.

ಷೇಕ್ಸ್‌ಪಿಯರನ "ಕಾಮಿಡಿ ಆಫ್ ಎರರ್" ನಾಟಕವನ್ನಾಧರಿಸಿದ ಕಲ್ಲೂರು ಉಮ್ಮನ್ ಪಿಲಿಪ್ಪೋಸ್ ಅವರ 'ಆಳಮಾರಾಟ್ಟಂ ಅಥವಾ ಒರು ನಲ್ಲ ಕೇಳಿಸಲ್ಲಾಪಂ' ಎಂಬುದು ಒಂದು ರೂಪಾಂತರ ಕೃತಿಯೇ ಹೊರತು ಸ್ವತಂತ್ರ ರಚನೆಯಲ್ಲ. ಕನ್ನಡದಲ್ಲಿಯೂ ಈ ಬಗೆಯ ಚರ್ಚೆಗಳಿವೆಯೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕನ್ನಡದ ಮೊದಲ ಸಾಮಾಜಿಕ ಕಾದಂಬರಿಯೆಂದು 1899 ರಲ್ಲಿ ಪ್ರಕಟವಾದ 'ಇಂದಿರಾಬಾಯಿಗೂ ಮೊದಲೇ 'ಭ್ರಾಂತಿ ವಿಲಾಸ' ಎಂಬೊಂದು ಕೃತಿ 1876 ರಲ್ಲಿ ಪ್ರಕಟವಾಗಿದೆ ಇದು ವಿಲ್ಲಿಯಂ ಷೇಕ್ಸ್‌ಪಿಯರ್‌ನ 'ಕಾಮಿಡಿ ಆಫ್ ಎರರ್' ನಾಟಕವನ್ನಾಧರಿಸಿದ ಈಶ್ವರಚಂದ್ರ ವಿದ್ಯಾಸಾಗರ ಅವರ ಕೃತಿಯ ಕನ್ನಡಾನುವಾದ. ಬಿ. ವೆಂಕಟಾಚಾರ್ಯ ಅವರು ಕಾದಂಬರಿಯೆಂಬ ಹೊಸ ಪ್ರಕಾರದ ಆರಂಭವನ್ನು ಈ ಕೃತಿಯ ಮೂಲಕ ಕನ್ನಡದಲ್ಲಿ ಸಾಧ್ಯವಾಗಿಸಿದ್ದಾರೆ. ಈ ಕೃತಿಯು ಕನ್ನಡದಲ್ಲಿ ಕಾದಂಬರಿ ಪ್ರಕಾರದ ಆರಂಭಕ್ಕೆ ನಾಂದಿ ಹಾಡಿದ ಕೃತಿಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

www.careerindia.com

CAREERINDIA

**121.** 'ಕುಂದಲತ'ದ ವೈಶಿಷ್ಟ್ಯವೇನು ?

(1) ಮಲಯಾಳಂ ಭಾಷೆಯ ಸಾಮಾಜಿಕ ಕಾದಂಬರಿ

(2) ಮಲಯಾಳಂ ಭಾಷೆಯ ಕಾದಂಬರಿ

(3) ಮಲಯಾಳಂ ಭಾಷೆಯ ರಮ್ಯಕೃತಿ

(4) ಮಲಯಾಳಂ ಭಾಷೆಯ ಕಾದಂಬರಿ ಲಕ್ಷಣದ ಮೊದಲ ಕೃತಿ

**122.** ಕುಂದಲತ ಕಾದಂಬರಿಯ ಶೈಲಿ :

(1) ಹಾಸ್ಯಭರಿತ ಶೈಲಿ (2) ರಮ್ಯ ಶೈಲಿ

(3) ವಿಡಂಬನಾತ್ಮಕ ಶೈಲಿ (4) ವ್ಯಂಗ್ಯ ಶೈಲಿ

**123.** 'ಕಂಡಿಕೆ' – ಈ ಪದದ ಅರ್ಥ :

(1) ಕಿಟಕಿ (2) ಭಾಗ (3) ಬರಹ (4) ಟಿಪ್ಪಣಿ

**124.** ಷೇಕ್ಸ್‌ಪಿಯರ್‌ನ ನಾಟಕವನ್ನು ಕಾದಂಬರಿ ರೂಪದಲ್ಲಿ ಕನ್ನಡದಲ್ಲಿ ತಂದವರು ಯಾರು ?

(1) ಗುಲ್ವಾಡಿ (2) ಬಿ. ವೆಂಕಟಾಚಾರ್ಯ

(3) ಕಲ್ಲೂರು ಉಮ್ಮನ್ (4) ಅಹೋಬಲ ಶಂಕರ

**125.** ಮಲಯಾಳಂನ ಮೊದಲ ಕೃತಿ ಎಂದು ವಾದಿಸುವ ಇನ್ನೂ ಎಷ್ಟು ಕೃತಿಗಳು (ಕುಂದಲತ ಬಿಟ್ಟು) ಸೂಚಿತವಾಗಿವೆ ?

(1) ಎರಡು (2) ಐದು (3) ನಾಲ್ಕು (4) ಮೂರು

**126.** ಈ ಕೆಳಗಿನ ಪದಗಳಲ್ಲಿ ಯಾವುದು ಸರಿ ?

(1) ಭೇಧ (2) ಭೇದ (3) ಬೇಧ (4) ಬೇದ

**127.** ಗೋವಿಂದ ಪಿಳ್ಳೈ ಯಾರು ?

(1) ಮಲಯಾಳದ ಮೊದಲ ಕಾದಂಬರಿಕಾರ

(2) ಮಲಯಾಳಿ ಭಾಷಾ ಚರಿತ್ರೆಯ ಮೊದಲ ಲೇಖಕರು

(3) ಮಲಯಾಳಿ ಭಾಷೆಯಲ್ಲಿನ ಬರಹಗಾರ

(4) ಆಧುನಿಕ ಮಲಯಾಳಿ ಕಥೆಗಾರ

**128.** 'ಸಾಹಿತ್ಯಾಸಕ್ತ' – ಈ ಪದದಲ್ಲಿ ಇರುವ ಸಂಧಿ :

(1) ಗುಣ ಸಂಧಿ (2) ಆದೇಶ ಸಂಧಿ

(3) ಆಗಮ ಸಂಧಿ (4) ಸವರ್ಣದೀರ್ಘ ಸಂಧಿ

www.careerindia.com

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 129-135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಸಕ್ರೆಮ್ಮಳಿಗೆ ಎಚ್ಚರವಾಗುತ್ತಿದ್ದಂಗೇ ಯಮನೂರುಸ್ವಾಮಿನ್ನ, ಗಾಳೆಮ್ಮನ್ನ ನೆನೆಯುತ್ತ ಎದ್ದು ಕುಂತಳು. ಜೀವಕ್ಕೆ ಬುಗುಲು ಇರಲಿಲ್ಲ: ಗಾಬರಿಯಾಗಲಿಲ್ಲ! ಮನಸ್ಸು ಯಾಕೋ ನಿರುಮ್ಮಳವಾಗಿತ್ತು! ತಿಂಗಳಿಂದ ಸಮಾಧಾನ ಅಂಬದೇ ಇಲ್ಲಿಲ್ಲ. ಯಾವುದಕ್ಕೂ ಆಸೆ ಮಾಡದ ಸಕ್ರೆಮ್ಮ ಹೆದರಿಕೊಂಡಿದ್ದಳು. ಅದು ಯಾಕಂತ ಆಕೆಗೆ ತಿಳಿದಂಗಾಗಿತ್ತು. ಇವತ್ತು ಮಾತ್ರ ಮೈ–ಮನಸ್ಸು ಹಗುರಾದಂಗ ಅನ್ನಿಸಿತು. ದೈವವನ್ನ ನೆನೆಯುತ್ತ ಎದ್ದು ಹಾಸಿಗೆ ಮಡಿಸಿ ಪಲ್ಲಂಗದ ಮ್ಯಾಲಿಟ್ಟಳು. ಪಲ್ಲಂಗ ಇದ್ದರೂ ಕೆಳಗ ಮಲಗುತ್ತಿದ್ದಳು. ಸೆರಗು ಹಾಕಿಕೊಂಡು ತಲಬಾಗಿಲಿಗೆ ಬಂದು, ಬಾಗಿಲು ತೆರೆದಳು. ನಸುಕು ತಿಳಿಯಾಗಿತ್ತು. ಕಣ್ಣಳತೆಗೆ ಕಾಣುವಲ್ಲೆಲ್ಲ ಮಲಗಿದ್ದ ಒಣಗದ್ದೆ, ಹೊಲಗಳು ಮುಪ್ಪಿಗೆ ಬಂದಂತಿದ್ದವು. ಮಣ್ಣೆತ್ತಿನ ಅಮಾಸಿ ಮುಗುದು, ಇನ್ನೇನು ಕರಿಗಡಬಿನ ಹುಣ್ಣಿಮೆ ಬರುವುದಿತ್ತು. ಆದ್ರೂ ಮಳೆಯ ಸುದ್ದಿಯೇ ಇರಲಿಲ್ಲ. ಆಷಾಢದ ಗಾಳಿ ಮಾತ್ರ ಜೋರಾಗಿತ್ತು. 'ಈ ವಾರ ಕಾಲುವೆಗೆ ನೀರು ಬಾರವಮ್ಮ' ಅಂದಿದ್ದ ಭೀಮರಾಯನ ಮಾತು ನೆಪ್ಪಾಯಿತ್ತು ಮುಗಿಲಿಗೆ ನೀರೊತ್ತ ಮೋಡಗಳು ಕವುಕಂಡು ಹಗಲಿನ ಕಳೆಯನ್ನೇ ಕೆಡಿಸಿದ್ದವು. ಮಳೆ ಮಾತ್ರ ಬಿದ್ದಿರಲಿಲ್ಲ. ಸಕ್ರೆಮ್ಮ ಮನೆಯಿಂದ ಹೊರಬಂದು ನಾಕಾರು ಮಾರು ದೂರದಲ್ಲಿದ್ದ ಬನ್ನಿಮರದ ಕಟ್ಟೆ ಕಡೆ ಬಂದು ಕುಂತಳು, ಗಾಳಿ ಬೀಸುತ್ತಿತ್ತು.

ಕಟ್ಟೆಯಿಂದ ಸಂಗಣ್ಣ ಸಾಹುಕಾರನ ಗದ್ದುಗೆ ಕಾಣುತ್ತಿತ್ತು. ಹೊಲದ ಆ ಮೂಲೆಯಲ್ಲಿ ಬೇವು–ಬನ್ನಿ ಒಂದರೊಳಗೊಂದು ಕಲೆತು ಬೆಳೆದು ನಿಂತಿದ್ದ ಮರಗಳ ಕೆಳಗೆ ಸಾಹಕಾರನ ಮಣ್ಣಾಗಿತ್ತು. ವಾರದ ಹಿಂದೆ ಸಾಹುಕಾರನ ಆರಾಧನೆ ದೊಡ್ಡದಾಗಿ ನಡೆದಿತ್ತು. ಆ ದಿನ ಹೊಲದ ತುಂಬ ಊರುಕೇರಿ ಜನಜಾತ್ರೆ ಸೇರಿತ್ತು. ಹೊಲಗದ್ದೆಗಳೆಲ್ಲ ಒಣಗಿದ್ದರಿಂದ ಕಾರು, ಜೀಪು, ಟ್ರ್ಯಾಕ್ಟರು, ಸೈಕಲ್ಲು ಮೋಟಾರುಗಳೆಲ್ಲ ಈ ಮನೆತನಕ ಬಂದು ನೆರದಿದ್ದವು. ಅಂದು ಸಾಹುಕಾರ ಇಲ್ಲದ್ದಕ್ಕೆ ದುಕ್ಕ ಬಂದಿತ್ತೋ, ಜನಜಾತ್ರಿ ನೋಡಿ ಮನಸ್ಸು ತುಂಬಿ ಕಣ್ಣೀರು ಬಂದಿತ್ತೋ ಸಕ್ರಮ್ಮನಿಗೆ ಒಂದೂ ತಿಳಿಯದಂಗಾಗಿತ್ತು! ಆದ್ರೂ ಬಂದವರ ಮುಂದೆ ತುಂಬಿದ ಕೊಡದಂಗ ಮಾತುಕತೆ ಆಡಿಕೊಂಡು ಓಡಾಡಿದ್ದಳು ಮಾಡುವವರಿಗೆ, ನೀಡುವವರಿಗೆ, ಬಂದು ಉಂಡು ಹೋಗುವವರಿಗೆ ಕಮ್ಮಿ ಇರಲಿಲ್ಲ. ಅವರಿಗೆಲ್ಲ ಸಂಗಣ್ಣ ಸಾಹುಕಾರನ ಮ್ಯಾಲೆ ಗೌರವಯಿತ್ತು. ಅದನ್ನ ಕಂಡು ಮನಸ್ಸು ತುಂಬಿ ಕಣ್ಣಾಗ ನೀರಾಡಿತ್ತು. ಸಾಹುಕಾರನ ಮನೆಮಂದಿ, "ಸಕ್ರೆಮ್ಮವ್ವ" ಅಂತ ಕರಕರದು ಆಡಿದ ಮಾತಿನಲ್ಲಿ ಕಕ್ಕಲಾತಿಯಿತ್ತು. ಪಂಪಾಪತಿ ಸಾಹುಕಾರನ ಹೆಂಡತಿ ಸುಮಂಗಲಮ್ಮ ಆ ದಿನ, 'ಇನ್ನ ಹೊಲ್ಲಮನಿ ವಾಸ ಸಾಕು, ಮನಿಗೆ ಬಂದು ಬುಡಮ್ಮ' ಅಂತ ಅಂದಾಗ, ಮಗಳಂತಿದ್ದ ಆಕೆ ಕಾಲಿಗೆ ಸಕ್ರೆಮ್ಮ ಬಗ್ಗಿದ್ದಳು. ಆಕೆ 'ತಗಿಯವ್ವ ಇದೇನು ?' ಅಂತ ತೋಳಿಡಿದು ನಿಂತಿದ್ದಳು. ಸಕ್ರೆಮ್ಮನಿಗೆ ಜನ್ಮ ಸಾರ್ಥಕ ಅನ್ನಿಸಿತ್ತು. ಸಕ್ರಮ್ಮನಿಗೆ ಆ ದಿನದ ಪ್ರಸಂಗ ಕಣ್ಣಿಗೆ ಕಟ್ಟಿದಂತೆ ಕಂಡಿತು.

**129.** ಸಕ್ರೆಮ್ಮನ ಬದುಕು ಏನಾಗುವುದಿತ್ತು ?

(1) ಸಾಹುಕಾರನ ಪ್ರೀತಿ ತಪ್ಪಿದ ಮೇಲೆ ಅತಂತ್ರವಾಗುವುದು

(2) ಒಬ್ಬ ಸಾಹುಕಾರನಿಂದ ಇನ್ನೊಬ್ಬನ ಮನೆಗೆ ಮನೆಗೆಲಸಕ್ಕೆ ಹೋಗುವುದು

(3) ಸಾಹುಕಾರ ಸತ್ತಿದ್ದರಿಂದ ಮುಂದೇನು ಎಂಬ ಆಲೋಚನೆ

(4) ಸಾಹುಕಾರನ ಮನೆಯಲ್ಲಿ ಇನ್ನು ಇರುವುದು ಹೇಗೆ ಎಂಬ ದು:ಖ

**130.** ಮಳೆ ಇಲ್ಲದ ಮೋಡದ ವಾತಾವರಣದ ವರ್ಣನೆ ಕಥೆಯಲ್ಲಿ ಯಾವುದರ ಸೂಚಕವಾಗಿದೆ ?

(1) ಕತ್ತಲಾಗುವುದನ್ನು ಸೂಚಿಸುವುದರ ವರ್ಣನೆ

(2) ಮಳೆ ಬರಬಹುದು ಎನ್ನುವುದರ ಸಂಕೇತ

(3) ಸಾಹುಕಾರ ಸತ್ತು ಹಳ್ಳಿ ಮಂಕಾಗಿದ್ದರ ಸಂಕೇತ

(4) ಮೋಡವಿದ್ದರೂ ಮಳೆ ಬರದಿರುವುದರ ವರ್ಣನೆ

**131.** **'ಪಲ್ಲಂಗ'** – ಈ ಪದದ ಅರ್ಥ :

(1) ಕಾಟು (2) ಕುರ್ಚಿ (3) ಮೇಜು (4) ಲಂಗ

**132.** ಈ ಊರಿನ ಸಾಹುಕಾರನದು ಎಂಥ ವ್ಯಕ್ತಿತ್ವ ?

(1) ಹಳ್ಳಿಯ ಎಲ್ಲರ ಪ್ರೀತಿಗಳಿಸಿದ್ದವನು

(2) ಎಲ್ಲರಿಗೂ ದಾನ ಮಾಡುವವನು

(3) ಗಂಭೀರ ಪ್ರವೃತ್ತಿಯವನು

(4) ತನ್ನ ದರ್ಪದಿಂದ ಜನರಿಗೆ ಹೆದರಿಸಿದವನು

**133.** **'ತಲೆಬಾಗಿಲು'** – ಈ ಪದದ ಅರ್ಥ :

(1) ಹಿಂಬಾಗಿಲು (2) ಮುಖ್ಯದ್ವಾರ

(3) ತಲೆಗೆ ಹತ್ತುವ ಬಾಗಿಲು (4) ಬಾಗಿಲಿನ ಮೇಲ್ಭಾಗ

**134.** ಸಕ್ರೆಮ್ಮಳ ಮನಸ್ಸು ಏನಾಗಿದೆ ?

(1) ಆತಂಕಗೊಂಡಿದೆ

(2) ಭಯದಲ್ಲಿ ಇದೆ

(3) ಸಮಾಧಾನವಿಲ್ಲದಾಗಿದೆ

(4) ಸಮಾಧಾನವಿಲ್ಲದ್ದು, ಈಗ ಸಮಾಧಾನಕ್ಕೆ ಬಂದಿದೆ

**135.** **'ಕಕ್ಕುಲಾತಿ'** – ಈ ಪದದ ಅರ್ಥ :

(1) ವಾಂತಿ (2) ಒಡನಾಟ

(3) ಅತಿಯಾದ ಸಂಬಂಧ (4) ಪ್ರೀತಿ

**136.** ಅಶ್ವಿನ್‌ಗೆ ಹುಟ್ಟಿನಿಂದಲೇ ಒಡಿಯಾ ಭಾಷೆ ಗೊತ್ತು ಮತ್ತು ಅವನು ಇಂಗ್ಲಿಷ್ ಮತ್ತು ಹಿಂದಿಯನ್ನು ಅಭ್ಯಾಸ ಮಾಡುತ್ತಾನೆ. ಈ ಹೇಳಿಕೆಯ ಆಧಾರದ ಮೇಲೆ, ಈ ಕೆಳಗಿನ ಯಾವ ಹೇಳಿಕೆಯು ನಿಜವಲ್ಲ ಎಂಬುದನ್ನು ಕಂಡುಹಿಡಿಯಿರಿ.

(1) ಅವನ ಇಂಗ್ಲಿಷ್ ಕಲಿಕೆಯು ಭಾಷಾ ಗಳಿಕೆಯಾಗಿದೆ

(2) ಅವನ ಒಡಿಯಾ ಕಲಿಕೆಯು ಭಾಷೆಯನ್ನು ಗಳಿಸಿರುವುದು

(3) ಅವನ ಹಿಂದಿ ಕಲಿಕೆಯು ಭಾಷಾ ಕಲಿಕೆಯಾಗಿದೆ

(4) ಅವನ ಇಂಗ್ಲಿಷ್ ಕಲಿಕೆಯು ಭಾಷಾ ಕಲಿಕೆಯಾಗಿದೆ

www.careerindia.com

**137.** ಸಾಧನ ಸಾಮಗ್ರಿಗಳ ಪ್ರೇರಣೆಯು ಇಂಥ ಸಂದರ್ಭದಲ್ಲಿ ಆಗುತ್ತದೆ :

(1) ಒಬ್ಬ ವ್ಯಕ್ತಿಯು ಪುಸ್ತಕವನ್ನು ಬರೆಯಲು ಭಾಷೆಯನ್ನು ಕಲಿಯುತ್ತಾನೆ.

(2) ಒಬ್ಬ ವ್ಯಕ್ತಿಯು ಉದ್ಯೋಗದಂತಹ ಪ್ರಯೋಜನಕಾರಿ ಕಾರಣಕ್ಕಾಗಿ ಭಾಷೆಯನ್ನು ಕಲಿಯುತ್ತಾನೆ.

(3) ಒಬ್ಬ ವ್ಯಕ್ತಿಯು ಸ್ಥಳೀಯ ಭಾಷಿಕರಿಗೆ ಹತ್ತಿರವಾಗಲು ಭಾಷೆಯನ್ನು ಕಲಿಯುತ್ತಾನೆ.

(4) ಒಬ್ಬ ವ್ಯಕ್ತಿಯು ತನ್ನ ಸಮುದಾಯಗಳ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗಾಗಿ ಭಾಷೆಯನ್ನು ಕಲಿಯುತ್ತಾನೆ.

**138.** ಕೃಪಾ ಮತ್ತು ಕರಣ್ ಅವಳಿ ಮಕ್ಕಳು ಮತ್ತು ಮಣಿಪುರಿಯ ನಿರ್ದಿಷ್ಟ ಉಪಭಾಷೆಯನ್ನು ಮಾತನಾಡುತ್ತಾರೆ. ಆದರೆ ಅವರ ಮಾತಿನಲ್ಲಿ ವ್ಯತ್ಯಾಸವಿದೆ. ಏಕಭಾಷೆಯನ್ನು ಮಾತನಾಡುವ ಅವರ ವೈಯಕ್ತಿಕ ವಿಶೇಷ ವಿಧಾನ ಯಾವುದು ?

(1) ಮಣಿಪುರಿ

(2) ಇಡಿಯಲೆಕ್ಟ್ (Idiolect)

(3) ಉಪಭಾಷೆ

(4) ಮಾತಿನ ರೀತಿ

**139.** ಭಾರತೀಯ ಸಂವಿಧಾನದಲ್ಲಿ ಇಂಗ್ಲಿಷ್ ಭಾಷೆಗೆ ಯಾವ ಸ್ಥಾನಮಾನ ನೀಡಲಾಗಿದೆ ?

(1) ಶಾಸನಬದ್ಧ ಸಂಸ್ಥೆಗಳ ಭಾಷೆ

(2) ಅಧಿಕೃತ ಭಾಷೆ

(3) ಅಸೋಷಿಯೇಟ್ ಅಧೀಕೃತ ಭಾಷೆ

(4) ವಿದೇಶಿ ಭಾಷೆ

**140.** ಒಬ್ಬ ವಿದ್ಯಾರ್ಥಿಯು ನಿರ್ದಿಷ್ಟ ವಲಯದಲ್ಲಿನ ದೌರ್ಬಲ್ಯ ಮತ್ತು ಬಲವನ್ನು ಗುರುತಿಸುವ ಪರೀಕ್ಷೆಯನ್ನು ಹೇಗೆ ಗುರುತಿಸುತ್ತಾರೆ ?

(1) ಪ್ರಾರಂಭದ ಪರೀಕ್ಷೆ (Formative test)

(2) ವಸ್ತುನಿಷ್ಠ ಪರೀಕ್ಷೆ (Objective test)

(3) ಸಿಂಧುತ್ವ ಪರೀಕ್ಷೆ (Validity test)

(4) ಗುರುತಿಸುವಿಕೆಯ ಪರೀಕ್ಷೆ (Diagnostic test)

**141.** ಅದಿತಿಯು ಪೂರ್ಣ ಭೂತಕಾಲದ ನಿಯಮಗಳನ್ನು ತಿಳಿದಿದ್ದಾಳೆ, ಆದರೆ ಸನ್ನಿವೇಶದಲ್ಲಿ ಬಳಸಲು ಆಗುತ್ತಿಲ್ಲ. ಅವಳು ಎಂಥ ಜ್ಞಾನವನ್ನು ಹೊಂದಿದ್ದಾಳೆ ಎಂದು ಹೇಳಿ ?

(1) ಜ್ಞಾನದ ಅನ್ವಯಿಕತೆ

(2) ಭಾಷಾ ಸ್ವಾಧೀನ ಸಾಧನ

(3) ಕಾರ್ಯವಿಧಾನದ ಜ್ಞಾನ (Procedure)

(4) ಘೋಷಣಾತ್ಮಕ ಜ್ಞಾನ (Declarative)

CAREERINDIA

**142.** ಕೆಳಗಿನವುಗಳಲ್ಲಿ ಯಾವುದು ಭಾಷೆಯ ವಿಷಯದಲ್ಲಿ ನಿಜವಲ್ಲ ?

(1) ಕೆಲವು ಭಾಷೆಗಳು ವಿಜ್ಞಾನ ಮತ್ತು ಎಂಜಿನಿಯರಿಂಗ್ ಅನ್ನು ಮಾತ್ರ ಉತ್ತಮವಾಗಿ ತಿಳಿಸಬಲ್ಲವು

(2) ಭಾಷೆಯು ಚಹರೆಯನ್ನು ವ್ಯಕ್ತಪಡಿಸುತ್ತದೆ

(3) ಭಾಷೆಯು ಇತಿಹಾಸದ ಭಂಡಾರ

(4) ಮಾನವನ ಜ್ಞಾನದ ಮೊತ್ತಕ್ಕೆ ಭಾಷೆಯು ಕೊಡುಗೆ ನೀಡುತ್ತದೆ

**143.** ಭಾಷಾ ತರಗತಿಯಲ್ಲಿ ಪ್ರಾಜೆಕ್ಟ್ ಕೆಲಸವನ್ನು ವಿನ್ಯಾಸಗೊಳಿಸುವ ಮತ್ತು ಮಾಡುವ ಹಂತಗಳು ಯಾವುವು ?

(1) ಕಲಿಯುವವರು ಯೋಜನೆಯ ಕೆಲಸವನ್ನು ಅವರು ಬಯಸಿದ ರೀತಿಯಲ್ಲಿ ವಿನ್ಯಾಸಗೊಳಿಸಬಹುದು ಮತ್ತು ಮಾಡಬಹುದು.

(2) ಗುಂಪುಗಳನ್ನು ರಚಿಸುವುದು, ಯೋಜನೆ, ಮಾಹಿತಿ ಸಂಗ್ರಹಣೆ, ಮಾಹಿತಿಯ ವ್ಯಾಖ್ಯಾನ ಕರಡು ಬರವಣಿಗೆ, ವಿಷಯವನ್ನು ಗುರುತಿಸುವುದು, ಮತ್ತು ವರದಿಯನ್ನು ಅಂತಿಮಗೊಳಿಸುವುದು.

(3) ಗುಂಪುಗಳನ್ನು ರಚಿಸುವುದು, ವಿಷಯವನ್ನು ಗುರುತಿಸುವುದು, ಯೋಜನೆ, ಮಾಹಿತಿ ಸಂಗ್ರಹಣೆ, ಮಾಹಿತಿ ವ್ಯಾಖ್ಯಾನ, ಕರಡು ಬರೆಯುವುದು, ಮತ್ತು ವರದಿಯ ಅಂತಿಮಗೊಳಿಸುವಿಕೆ.

(4) ಗುಂಪುಗಳನ್ನು ರಚಿಸುವುದು, ವಿಷಯವನ್ನು ಗುರುತಿಸುವುದು, ಯೋಜನೆ, ಮಾಹಿತಿ ಸಂಗ್ರಹಣೆ, ಕರಡು ಬರೆಯುವುದು, ಮಾಹಿತಿ ವ್ಯಾಖ್ಯಾನ, ಮತ್ತು ವರದಿಯ ಅಂತಿಮಗೊಳಿಸುವಿಕೆ.

**144.** ಆಲಿಸುವಿಕೆಯನ್ನು ಮಾಡಲು ಟಾಪ್–ಡೌನ್ ವಿಧಾನವು ಇದನ್ನು ಒಳಗೊಂಡಿದೆ :

(1) ಪ್ರತಿಯೊಂದು ಧ್ವನಿ ಪದಗಳು, ನುಡಿಗಟ್ಟುಗಳು, ಕ್ಲಾಸ್‌ಗಳು, ಮತ್ತು ವಾಕ್ಯಗಳನ್ನು ಆಲಿಸುವುದು.

(2) ನಿರ್ದಿಷ್ಟ ವಿವರಗಳಿಗೆ ಗಮನಕೊಡುವುದು.

(3) ಭಾಷಣ, ಪದ್ಯ, ಅಥವಾ ಆಡಿಯೋದ ಸಾರಾಂಶವನ್ನು ಆಲಿಸುವುದು.

(4) ಪದ್ಯ, ಭಾಷಣ, ಅಥವಾ ಆಡಿಯೋದ ಒಟ್ಟಾರೆ ಸಂದೇಶವನ್ನು ಆಲಿಸುವುದು.

**145.** ಏಳನೆಯ ತರಗತಿಯ ಶಿಕ್ಷಕರು ಒಬ್ಬ ವ್ಯಕ್ತಿಯ ವಿವರಣೆಯನ್ನು ಬರೆಯುವ ಕೆಲಸವನ್ನು ನೀಡಲು ಬಯಸಿದ್ದರು. ಅವರು ತರಗತಿಯಿಂದ ಆಚೆ ಹೋಗಿ ತರಗತಿಗೆ ವ್ಯಾಪಾರಿಯನ್ನು (hawker) ಬುಟ್ಟಿಯ ಸಮೇತ ಕರೆತಂದಳು. ಅವನಿಗೆ ಸುಮಾರು ಏಳು ನಿಮಿಷ ಅಲ್ಲಿ ಇರಲು ಹೇಳಿದಳು. ತನ್ನ ವಿದ್ಯಾರ್ಥಿಗಳನ್ನು ಜೋಡಿಗಳಾಗಿ ಕೆಲಸ ಮಾಡಲು ಹೇಳಿ ಆ ವ್ಯಕ್ತಿಯ ವಿವರಣೆಯನ್ನು ಬರೆಯಲು ಹೇಳಿದಳು. ಈ ಚಟುವಟಿಕೆಯಲ್ಲಿ ವ್ಯಾಪಾರಿಯನ್ನು (ಹಾಕರ್‌ನನ್ನು) ಏನೆಂದು ನೀವು ತಿಳಿಯುತ್ತೀರಿ ?

(1) ಸಾಧನ ಸಾಮಗ್ರಿಗಳು
(2) ಬೋಧನಾ ಸಹಾಯಕ
(3) ಹಾಕರ್ (ವ್ಯಾಪಾರಿ)
(4) ಚಟುವಟಿಕೆಯಲ್ಲಿ ಭಾಗವಹಿಸುವವನು

**146.** ಏಳನೆಯ ತರಗತಿಯ ಶಿಕ್ಷಕಿಯು ಪಠ್ಯದಲ್ಲಿ ಪ್ರಸ್ತುತ ಪಡಿಸಲಾದ ಜನರು ಮತ್ತು ಸಮುದಾಯದ ಶಕ್ತಿ ಮತ್ತು ಗುರುತುಗಳ ಹಿನ್ನೆಲೆಯಲ್ಲಿ ಪಠ್ಯಭಾಗವನ್ನು ಕಲಿಯುವವರು ಓದಬೇಕೆಂದು ಬಯಸುತ್ತಾಳೆ ಕಲಿಯುವವರಲ್ಲಿ ಏನನ್ನು ಉತ್ತೇಜಿಸುವ ಗುರಿಯು ಶಿಕ್ಷಕಿಗೆ ಇದೆ ?

(1) ಸಾಹಿತ್ಯಕ ಕೌಶಲ್ಯಗಳು
(2) ಭಾಷಾ ಸಾಕ್ಷರತೆ
(3) ವಿಮರ್ಶಾತ್ಮಕ ಸಾಕ್ಷರತೆ
(4) ವಿಶ್ಲೇಷಣಾತ್ಮಕ ಓದುವಿಕೆ

www.careerindia.com

**147.** ರಾಷ್ಟ್ರೀಯ ಶಿಕ್ಷಣ ನೀತಿ (NEP) 2020 ರ ಪ್ರಕಾರ ಶಾಸ್ತ್ರೀಯ ಭಾಷೆಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿ ?

(1) ದ್ವಿತೀಯ ಹಂತದಲ್ಲಿ ಒಂದು ಮೂಲ ಭಾಷೆಯಾಗಿ (core) ಶಾಸ್ತ್ರೀಯ ಭಾಷೆಯ ಅಧ್ಯಯನ

(2) ದ್ವಿತೀಯ ಘಟ್ಟದಲ್ಲಿ ಹೆಚ್ಚುವರಿ ಆಯ್ಕೆಯಾಗಿ ಶಾಸ್ತ್ರೀಯ ಭಾಷೆಯ ಅಧ್ಯಯನ

(3) ತ್ರಿಭಾಷಾ ಸೂತ್ರದ ಅಡಿಯಲ್ಲಿ ಶಾಸ್ತ್ರೀಯ ಭಾಷೆಯ ಅಧ್ಯಯನವು ಒಂದು ಆಯ್ಕೆಯಾಗಿ

(4) ಪೂರ್ವ ಸಿದ್ಧತಾ ಹಂತದಲ್ಲಿ ಶಾಸ್ತ್ರೀಯ ಭಾಷೆಯ ಅಧ್ಯಯನ

**148.** ಇಲ್ಲಿ ಒಂದು ಪಠ್ಯವಿದೆ. ಪಠ್ಯವು ಯಾವ ಭಾಷಾ ರಿಜಿಸ್ಟರ್‌ಗೆ ಸೇರಿದ್ದು ಎನ್ನುವುದನ್ನು ಓದಿ, ಕಂಡುಹಿಡಿಯಿರಿ.

ಇದ್ದಕ್ಕಿದ್ದಂತೆ ಕ್ರಾಂತಿಯ ನಂತರ ಇದನ್ನು ಬದಲಾಯಿಸಲು ಸಾಧ್ಯವಾಯಿತು. ಯೂರೋಪು ಮತ್ತು ಏಷ್ಯಾ ಸೇರಿದಂತೆ, ಪ್ರಪಂಚದ ಅನೇಕ ಭಾಗಗಳಲ್ಲಿ ವೈಯಕ್ತಿಕ ಹಕ್ಕುಗಳ ಬಗ್ಗೆ ಮತ್ತು ಸಾಮಾಜಿಕ ಶಕ್ತಿಯನ್ನು ಯಾರು ನಿಯಂತ್ರಿಸುತ್ತಾರೆ ಎಂಬುದರ ಕುರಿತು ಹೊಸ ವಿಚಾರಗಳನ್ನು ಚರ್ಚಿಸಲು ಪ್ರಾರಂಭಿಸಿತು. ಭಾರತದಲ್ಲಿ ರಾಜಾರಾಮ್ ಮೋಹನ್‌ರಾಯ್ ಮತ್ತು ಡರೋಜಿಯೊ ಫ್ರೆಂಚ್ ಕ್ರಾಂತಿಯ ಮಹತ್ವದ ಬಗ್ಗೆ ಮಾತನಾಡಿದರು. ವಸಾಹತುಗಳಲ್ಲಿನ ಬೆಳವಣಿಗೆಗಳು ಇದರಿಂದ ಸಾಮಾಜಿಕ ಬದಲಾವಣೆಯ ಆಲೋಚನೆಗಳನ್ನು ಮರುರೂಪಿಸಿದವು.

(1) ಕ್ರಾಂತಿಯ ರಿಜಿಸ್ಟರ್ (2) ವಿಜ್ಞಾನ ರಿಜಿಸ್ಟರ್

(3) ರಾಜಕೀಯ ರಿಜಿಸ್ಟರ್ (4) ಸಮಾಜಿಕ ಜ್ಞಾನ ರಿಜಿಸ್ಟರ್

**149.** 'ಭಾಷೆಯ ಮೌಲ್ಯಮಾಪನವು ಸಾಮಾನ್ಯವಾಗಿ ಗ್ರಹಿಕೆಯ ಕೌಶಲ್ಯಗಳಿಗೆ ಮಹತ್ವಕೊಡುವುದಿಲ್ಲ' ಎಂದು ಎಂಟನೆಯ ತರಗತಿಯ ಸುಭಾಷ್ ಎಂಬ ಅಧ್ಯಾಪಕ ವಿಷಾದಿಸುತ್ತಾನೆ. ಅವರು ಹೇಳುವ 'ಗ್ರಹಿಕೆಯ ಕೌಶಲ್ಯಗಳು' ಅಂದರೇನು ?

(1) ಮಾತನಾಡುವುದು ಮತ್ತು ಬರೆಯುವುದು

(2) ಕೇಳುವುದು ಮತ್ತು ಬರೆಯುವುದು

(3) ಮಾತನಾಡುವುದು ಮತ್ತು ಓದುವುದು

(4) ಕೇಳುವುದು ಮತ್ತು ಓದುವುದು

**150.** ಭಾಷೆಯು ಒಂದು ವ್ಯವಸ್ಥೆಯಾಗಿ ಕೆಲಸಮಾಡುತ್ತದೆ ಎಂಬುದನ್ನು ಕಲಿಯುವವರು ಅರ್ಥಮಾಡಿಕೊಂಡು ಅನ್ವಯಿಸುತ್ತಾರೆ.

(1) ಕಾರ್ಯತಂತ್ರದ ಸಾಮರ್ಥ್ಯ

(2) ಸಂವಹನ ಸಾಮರ್ಥ್ಯ

(3) ವ್ಯವಸ್ಥಿತ ಸಾಮರ್ಥ್ಯ (Systemic competence)

(4) ಸಾಮಾಜಿಕ ಭಾಷಾ ಸಾಮರ್ಥ್ಯ

- o 0 o -

SPACE FOR ROUGH WORK

www.careerindia.com

CAREERINDIA

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ **ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. OMR ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ OMR ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್‌ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ OMR ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, OMR ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು. **ಪರೀಕ್ಷಾರ್ಥಿಗಳು ತಮ್ಮ ಎಡಗೈಯ ಹೆಬ್ಬಟ್ಟಿನ ಗುರುತನ್ನು ಹಾಜರಿ ಪತ್ರದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಹಾಕಬೇಕು.**
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (Calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ–ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ–ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. **ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ OMR ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.**

www.careerindia.com

CAREERINDIA

## निम्नलिखित निर्देशों को ध्यान से पढ़ें :

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **नीले/काले बॉल पॉइन्ट पेन** से भरें। एक बार उत्तर अंकित करने के बाद उसे बदला नहीं जा सकता है।
3. परीक्षार्थी सुनिश्चित करें कि इस OMR उत्तर पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक OMR उत्तर-पत्र में निर्धारित स्थान के अतिरिक्त अन्यत्र न लिखें।
4. परीक्षा पुस्तिका एवं OMR उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं OMR उत्तर पत्र के कोड या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
5. परीक्षा पुस्तिका/OMR उत्तर पत्र में दिए गए परीक्षा पुस्तिका कोड व संख्या को परीक्षार्थी सही तरीके से उपस्थिति-पत्र में लिखें।
6. OMR उत्तर पत्र में कोडित जानकारी को एक मशीन पढ़ेगी। इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए। इस सूचना का पालन न होने पर इसे परीक्षा में अनुचित साधनों का प्रयोग माना जाएगा और परीक्षार्थी विरुद्ध कार्यवाही की जाएगी, परीक्षा रद्द करने सहित।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
11. कार्यरत निरीक्षक को अपना OMR उत्तर पत्र दिए बिना एवं उपस्थिति-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे। यदि किसी परीक्षार्थी ने दूसरी बार उपस्थिति-पत्र पर हस्ताक्षर नहीं किए, तो यह माना जाएगा कि उसने OMR उत्तर पत्र नहीं लौटाया है और यह अनुचित साधन का मामला माना जाएगा। **परीक्षार्थी अपने बाएँ हाथ के अंगूठे का निशान उपस्थिति-पत्र में दिए गए स्थान पर अवश्य लगाएँ।**
12. इलेक्ट्रॉनिक/हस्तचालित परिकलक का उपयोग वर्जित है।
13. परीक्षा हॉल/कक्ष में आचरण के लिए परीक्षार्थी परीक्षण संस्था के सभी नियमों एवं विनियमों द्वारा नियमित हैं। अनुचित साधनों के सभी मामलों का फैसला परीक्षण संस्था के नियमों एवं विनियमों के अनुसार होगा।
14. किसी भी परिस्थिति में परीक्षा पुस्तिका और OMR उत्तर पत्र का कोई भाग अलग न करें।
15. **परीक्षा सम्पन्न होने पर, परीक्षार्थी हॉल/कक्ष छोड़ने से पूर्व OMR उत्तर पत्र निरीक्षक को अवश्य सौंप दें।** ***परीक्षार्थी अपने साथ इस परीक्षा पुस्तिका को ले जा सकते हैं।***

## READ THE FOLLOWING INSTRUCTIONS CAREFULLY :

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Blue / Black Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the OMR Answer Sheet is not folded. Do not make any stray marks on the OMR Answer Sheet. Do not write your Roll No. anywhere else except in the specified space in the OMR Answer Sheet.
4. Handle the Test Booklet and OMR Answer Sheet with care, as under no circumstances (except for discrepancy in Test Booklet Code or Number and OMR Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/OMR Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, it will be considered as using unfair means in the examination and action will be taken against the candidate including cancellation of examination.
9. Each candidate must show on demand his/her Admit Card to the Invigilator.
10. No candidate, without special permission of the Centre Superintendent or Invigilator, should leave his/her seat.
11. The candidates should not leave the Examination Hall/Room without handing over their OMR Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet second time will be deemed not to have handed over the OMR Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Examining Body with regard to their conduct in the Examination Hall/Room. All cases of unfair means will be dealt with as per Rules and Regulations of the Examining Body.
14. No part of the Test Booklet and OMR Answer Sheet shall be detached under any circumstances.
15. **On completion of the test, the candidate must hand over the OMR Answer Sheet to the Invigilator in the Hall / Room.** ***The candidates are allowed to take away this Test Booklet with them.***

www.careerindia.com